**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ,** ಹುಣಸೂರು

# C.C. 1001/2020

| | | | |
|---|---|---|---|
| ಸಾಕ್ಷಿಯ ಹೆಸರು | ಶಿವಕುಮಾರ | ಪ್ರಾಸಾ | 01 |
| ತಂದೆ/ಗಂಡನ ಹಸರು | ಪುಟ್ಟಸ್ವಾಮಿಗೌಡ | ಚಾಸಾ | 03 |
| ವಯಸ್ಸು | 39 ವರ್ಷ | | |
| ವೃತ್ತಿ | ಅಬಕಾರಿ ಮುಖ್ಯ ಪೇದೆ | | |
| ವಾಸ ಸ್ಥಳ | ಕೆ.ಆರ್. ನಗರ | | |

**ಸಾಕ್ಷಿಗೆ ದಿನಾಂಕಃ28.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು**

**ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ**

ನಾನು ದಿಃ28.08.2015 ರಿಂದ ದಿಃ03.02.2024 ಹುಣಸೂರು ಅಬಕಾರಿ ಕಛೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ16.02.2019 ರಂದು ನಾನು ಚಾಸಾ-4, 5 ಮತ್ತು 9 ರವರೊಂದಿಗೆ ಹುಣಸೂರು ವಲಯದ ಮಾರ್ಗ ಸೂಚಿ 1 ರಲ್ಲಿ ಗಸ್ತು ಮಾಡುತ್ತಿದ್ದಾಗ ಬೀರತಮ್ಮನಹಳ್ಳಿ ಗ್ರಾಮದಲ್ಲಿ ಗಸ್ತು ಮಾಡಿ ಮುಂದುವರೆಯುತ್ತಿದ್ದಾಗ, ಮಾರ್ಗ ಮದ್ಯದಲ್ಲಿ ಒಬ್ಬ ವ್ಯಕ್ತಿ ಚಾಸಾ-9 ರವರಿಗೆ ಒಂದು ಮಾಹಿತಿಯನ್ನು ನೀಡಿದ್ದು ಕಡೆಮನುಗನಹಳ್ಳಿ ಗ್ರಾಮದಲ್ಲಿ ವಾಹನದಲ್ಲಿ ನಿಲ್ಲಿಸಿ ಅಲ್ಲಿದ್ದ ಜನರನ್ನು ಕರೆದು ದಾಳಿಯ ವಿಚಾರವನ್ನು ತಿಳಿಸಿ ಉಡವೆಪುರ ಗ್ರಾಮದ ವರುಣಕುಮಾರ ತನ್ನ ಪಂಪಸೆಟನಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿರುವುದಾಗಿ ಮಾಹಿತಿ ಬಂದಿದ್ದು ಅದನ್ನು ಪರೀಶಿಲಿಸಲು ಪಂಚರಾಗಿ ಬರುವಂತೆ ಕೋರಿಕೊಂಡ ಮೇರೆಗೆ ಚಾಸಾ-1 ಮತ್ತು 2 ರವರು ಒಪ್ಪಿ ಬಂದಿರುತ್ತಾರೆ. ಪಂಚರಿಗೆ ಸ್ಥಳದಲ್ಲಿ ನೋಟೀಸ್ ನೀಡಿ ಸಹಿ ಪಡೆದುಕೊಂಡಿರುತ್ತೇನೆ. ನಂತರ ಮಾಹಿತಿ ಪ್ರಕಾರ ಆರೋಪಿಯ ಮನೆಯ ಹತ್ತಿರ ಹೋಗಿ ನೋಡಲಾಗಿ ಯಾರು

ಇರಲಿಲ್ಲ ಪಕ್ಕದ ಪಂಪಸೆಟಗೆ ಹೋಗಿ ನೋಡಲಾಗಿ ಬಾಗಿಲು ಹಾಕಿದ್ದು, ಮಾನ್ಯ ನ್ಯಾಯಾಲಯದಿಂದ ಶೋಧನ ಸಮೋಚಿತ ವಾರಂಟನ್ನು ಪಡೆಯಲು ಸಾಕಷ್ಟು ಸಮಯವಕಾಶ ಇಲ್ಲದೇ ಇರುವುದರಿಂದ ಕಾರಣ ನಮೂದಿಸಿ ಸ್ಥಳದಲ್ಲಿ ಶೋಧನ ಸಮೋಚಿತ ವಾರಂಟನ್ನು ತಯಾರಿಸಿ ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇವೆ.

ಪರಸ್ಪರ ಅಂಗಶೋಧನೆ ಮಾಡಿಕೊಂಡು ಬಾಗಿಲು ತೆರೆದು ನೋಡಿದಾಗ ಬಾಗಿಲನ ಬಲ ಭಾಗದ ಹಿಂಭಾಗದಲ್ಲಿ ನೋಡಲಾಗಿ 90 ಎಮ್.ಎಲ್ ನ ಓರಿಜಿನಲ್ ಚಾಯ್ಸ ಡಿಲಕ್ಸ ವಿಸ್ಕಿಯ 4 ರಟ್ಟಿನ ಬಾಕ್ಸಗಳು ಇದ್ದು ಪ್ರತಿಯೊಂದು ಬಾಕ್ಸನಲ್ಲಿ 96 ಟೆಟ್ರಾ ಪ್ಯಾಕೇಟ್‌ಗಳು ಇದ್ದವು. ವಶಪಡಿಸಿಕೊಂಡ ಮದ್ಯಗಳ ಓರಿಜಿನಲ್ ಮದ್ಯದ ಟೆಟ್ರಾ ಪ್ಯಾಕೇಟ್ ಪೈಕಿ ಪ್ರತಿಯೊಂದು ಬಾಕ್ಸನಿಂದ ತಲಾ 10 ಪ್ಯಾಕೇಟ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಬಿಳಿ ಚೀಲಕ್ಕೆ ಹಾಕಿ ದಾರದಿಂದ ಕಟ್ಟಿ ಅರಗು ಹಚ್ಚಿ ಸೀಲ ಮಾಡಲಾಯಿತು. ಮಾದರಿ ಸಣ್ಣ ಸಣ್ಣ ಚೀಟಟಿಗಳನ್ನು ತಯಾರಿಸಿ ಪಂಚರ ಸಹಿ ಪಡೆದು ಅಂಟಿಸಲಾಯಿತು. ನಂತರ ಆರೋಪಿಯ ಹೆಸರು ವಿಳಾಸ ಕೇಳಲಾಗಿ ಆರೋಪಿಯ ಹೆಸರು ವರುಣಕುಮಾರ ಬಿನ್ ಬಿದಪ್ಪ ಸಾಃ ಉಡುವೆಪುರ ಗ್ರಾಮ ಎಂದು ತಿಳಿಸಿದರು. ಸದರಿ ಮದ್ಯವನ್ನು ಮಾರಾಟ ಮಾಡಲು ಪರವಾನಿಗೆ ಇರುವುದಿಲ್ಲ.

ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡಿರುತ್ತೇವೆ. ಮಹಜರ್ ನ್ನು ಮ.12.00 ರಿಂದ 1.30 ರವರೆಗೆ ನಾನು ಬರೆದು ಜರುಗಿಸಿರುತ್ತೇನೆ. ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸುತ್ತೇನೆ ಎಂದು ತಿಳಿಸಿದ್ದು, ಇಂದು ನ್ಯಾಯಾಲಯದಲ್ಲಿ ಆರೋಪಿ ಗೈರು ಹಾಜರಿದ್ದು, ಆರೋಪಿ ಪರ ವಕೀಲರು ವಿನಾಯತಿ ಕೋರಿ ಅರ್ಜಿ ಸಲ್ಲಿಸಿದ್ದು, ಆರೋಪಿಯ ಗುರುತಿಸುವಿಕೆಗೆ ತಕರಾರನ್ನು

ಸೂಚಿಸಿರುವುದಿಲ್ಲ. ಸಾಕ್ಷಿ ನ್ಯಾ.ದ ಮುಂದಿರುವ ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ-1 ಎಂದು ಗುರುತಿಸಲಾಯಿತು.

**ಪಾಟೀಸವಾಲು ಆರೋಪಿ ಪರ ವಕೀಲರಿಂದಃ**

ಸದರಿ ದಿನ ನಾನು ಚಾಸಾ-9, 4, 5 ಹಾಗೂ ಪಂಚರು ಸ್ಥಳಕ್ಕೆ ಹೋಗಿರುತ್ತೇವೆ. ಪಂಚರು ಕಡೆಮನುಗನಹಳ್ಳಿ ಗ್ರಾಮದವರು. ನಾವು ಒಟ್ಟು 4 ಜನರು ಇಲಾಖೆಯಿಂದ ಹೋಗಿರುತ್ತೇವೆ. ನಮ್ಮ ಠಾಣೆಯಿಂದ ದಾಳಿ ಮಾಡಿದ ಸ್ಥಳ 30 ಕಿ.ಮೀ ಅಂತರದಲ್ಲಿದೆ. ಸ್ಥಳಕ್ಕೆ ಹೋಗಲು ಸುಮಾರು ಅರ್ಧ ಗಂಟೆ ಆಗಬಹುದು. ನ್ಯಾಯಾಲಯದಿಂದ ಶೋಧನಾಸ ಮೋಚಿತ ವಾರಂಟನ್ನು ಪಡೆಯಲು ಸಾಕಷ್ಟು ಸಮಯ ಇದ್ದರು ಸಹ ಸಮಯ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉದ್ದೇಶ ಪೂರ್ವಕವಾಗಿ ನ್ಯಾಯಾಲಯದಿಂದ ಶೋಧನಾ ಸಮೋಚಿತ ವಾರಂಟನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರನ್ನು ಠಾಣೆಯಲ್ಲಿ ಬರೆದಿರುತ್ತೇವೆ ಎಂದರೆ ಸರಿಯಲ್ಲ. ಪಂಚನಾಮೆ ಬರೆದ ನಂತರ ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿ. ಸದರಿ ದಿನ ನಾವು ಸ್ಥಳಕ್ಕೆ ಹೋಗಿಲ್ಲ ಠಾಣೆಯಲ್ಲಿ ಪಂಚರ ಸಹಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮು.ಮಾ-1 ನ್ನು ಆರೋಪಿಯ ವಶದಿಂದ ಪಡೆದುಕೊಂಡಿಲ್ಲ ಠಾಣೆಯಲ್ಲಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಪಂಚರೊಂದಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರು ಸಹ ನಮ್ಮ ಠಾಣೆಯ ಅಂಕಿ ಅಂಶಗಳಿಗಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ. ಓ. ಹೇ. ಸ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹುಣಸೂರು.